**<u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಗುರುತಿಸಲ್ಪಟ್ಟ ಯೋಜನೆಗಳಿಗಾಗಿ "ನಿಗಮಗಳ ಸಾಮಾಜಿಕ ಜವಾಬ್ದಾರಿ" ವತಿಯಿಂದ (Corporate Social Responsibility) ಅನುದಾನಕ್ಕಾಗಿ ಪ್ರಸ್ತಾವನೆ.</u>**

**<u>ಪೀಠಿಕೆ:</u>**

ಭಾರತ ಅಸಂಖ್ಯಾತ ವಿರೋಧಾಭಾಸಗಳಿಂದ ಕೂಡಿದ ದೇಶ. ಒಂದೆಡೆ ವಿಶ್ವದ ಅತಿದೊಡ್ಡ ಆರ್ಥಿಕ ದೇಶಗಳಲ್ಲೊಂದು ಮತ್ತು ಜಾಗತಿಕ ಸ್ಪರ್ಧೆಯಲ್ಲಿ ಮುಖ್ಯ ಪಾಲುದಾರ. ಇನ್ನೊಂದೆಡೆ ಅತಿ ಬಡತನದಿಂದ ವಾಸಿಸುತ್ತಿರುವ ಜನರ (ಬಡ ಜನರ ಸಂಖ್ಯೆ ಇಳಿಮುಖವಾಗಿದ್ದರೂ ಸಹ) ಮತ್ತು ಅತಿ ಹೆಚ್ಚು ಜನ ಸಂಖ್ಯೆಯ ಅಪೌಷ್ಠಿಕ ಮಕ್ಕಳ ವಾಸಸ್ಥಾನವಾಗಿದೆ. ಇದರಿಂದ ಬೆಳವಣಿಗೆ ಲಾಭಗಳು ಅಸಮಾನವಾಗಿ ಹಂಚಿಕೆಯಾದ ಚಿತ್ರಣ ಕಂಡು ಬರುತ್ತಿದೆ ಮತ್ತು ಇದು ಸಾಮಾಜಿಕ ಅಸಹನೆಯ ಮೂಲಕಾರಣ ಎಂದು ಅನೇಕರು ನಂಬಿದ್ದಾರೆ.

ಸರ್ಕಾರ ಹಾಗೂ ನಿಯಂತ್ರಕರು ಈ ಸಾಮಾಜಿಕ ಅಸಹನೆ ಬಗ್ಗೆ ಪ್ರತಿಕ್ರಿಯಿಸಿಸ್ದಾರೆ. ಸಾಮಾಜಿಕ, ಪರಿಸರ ಮತ್ತು ವ್ಯವಹಾರಿಕ ಆರ್ಥಿಕ ಜವಾಬ್ದಾರಿಗಳಿಗೆ ರಾಷ್ಟ್ರೀಯ ಸ್ವಯಂ ಸೇವಾ ಮಾರ್ಗಸೂಚಿಗಳು ಮತ್ತು "ಸಾಮಾಜಿಕ ಜವಾಬ್ದಾರಿ ನಿಗಮದ ನಿಬಂಧನೆ ಕಂಪನಿ ಕಾಯ್ದೆ 2013ರ" ಅಡಿಯಲ್ಲಿ ಕ್ರಮ ಕೈಗೊಂಡಿರುವುದು ಈ ರೀತಿಯ ಎರಡು ಉದಾಹಣೆಗಳು.

ಸಾಮಾಜಿಕ ಜವಾಬ್ದಾರಿ ನಿಗಮವನ್ನು "ಸಂಸ್ಥೆಯು ಜವಾಬ್ದಾರಿ ಸಮೂಹದ ಮೇಲೆ ಬೀರುವ ಪ್ರಭಾವ" ಎಂದು ವ್ಯಾಖ್ಯಾನಿಸಬಹುದು. ಸಮಾಜದ ಜವಾಬ್ದಾರಿಗಳನ್ನು ಸಂಪೂರ್ಣವಾಗಿ ಭರಿಸುವ ಸಂಸ್ಥೆಗಳು ಸಾಮಾಜಿಕ, ಪರಿಸರ ಮತ್ತು ಮಾನವನ ನೀತಿ ಹಕ್ಕುಗಳ ಜೊತೆಗೆ ಗ್ರಾಹಕರ ಸಂಬಂಧಗಳನ್ನು ತಮ್ಮ ಸಂಸ್ಥೆಯ ವ್ಯಾಪಾರ ಕಾರ್ಯಾಚರಣೆ ಮತ್ತು ಸೂಕ್ತ ತಂತ್ರಗಳೊಂದಿಗೆ ಪಾಲುದಾರರ ನಿಕಟ ಸಹಯೋಗ ಹೊಂದಬಹುದು.




ನಿಗಮಗಳ ಸಾಮಾಜಿಕ ಜವಾಬ್ದಾರಿಗಳ ಮತ್ತು ಬೆಂಬಲ ಒಂದಕ್ಕೊಂದು ಹೊಂದಿಕೊಂಡಿರುವುದರಿಂದ ಕಂಪನಿಯೊಂದಿಗೆ ಪಾಲುದಾರರ ಒಪ್ಪಂದ ಮಾಡಿಕೊಂಡು ವ್ಯಾಪಾರವನ್ನು ಆರ್ಥಿಕ, ಸಾಮಾಜಿಕ, ಪರಿಸರದಲ್ಲಿ ಉಳಿಯುವಂಥೆ ಪಾರದರ್ಶಕ ಮತ್ತು ನೈತಿಕವಾಗಿ ನಡೆಸಬಹುದಾಗಿದೆ.

ಜನತೆಗೆ ಗುಣಮಟ್ಟದ ಆರೋಗ್ಯದ ಆರೈಕೆ ಸೇವೆಗಳನ್ನು ಒದಗಿಸುವುದು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮುಖ್ಯ ಗುರಿಯಾಗಿದೆ. "ಎಲ್ಲರಿಗೂ ಆರೋಗ್ಯ, ಎಲ್ಲಡೆಯೂ ಆರೋಗ್ಯ" ಎಂಬುದು ಕರ್ನಾಟಕ ಸರ್ಕಾರದ ಮುಖ್ಯ ಧ್ಯೇಯವಾಗಿದೆ.

ಗುಣಮಟ್ಟದ ಸೇವೆಗಳನ್ನು ಎಲ್ಲರಿಗೂ ದೊರೆಯುವಂತೆ ಮಾಡುವುದೇ ಇಂದಿನ ಮುಖ್ಯ ಉದ್ದೇಶ.

**ಗುರಿ:** ವ್ಯಾಪಕ ಮತ್ತು ಗುಣಮಟ್ಟದ ಆರೋಗ್ಯ ಆರೈಕೆ ಸೇವೆಗಳನ್ನು ನ್ಯಾಯರೀತಿಯಲ್ಲಿ ದೊರೆಯುವಂತೆ ಖಚಿತಪಡಿಸಿಕೊಳ್ಳುವುದು, ವಲಯ ಅಸಮಾನತೆಯನ್ನು ಹೋಗಲಾಡಿಸುವುದು, ಜನಸಂಖ್ಯೆ ಸ್ಥಿತಗೊಳಿಸುವುದು, ಆಯುಷ್ ಪದ್ಧತಿಯನ್ನು ಆರೋಗ್ಯ ಪದ್ಧತಿಯಲ್ಲಿ ಸಮಗ್ರವಾಗಿಸುವುದು, ಉತ್ತಮ ಅಂಗೀಕಾರಕ್ಕಾಗಿ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಸಮುದಾಯವನ್ನು ಭಾಗವಹಿಸುವಂತೆ ಮಾಡುವುದು.

ಸಮುದಾಯದ ಆರೋಗ್ಯದ ಆರೈಕೆಯಲ್ಲಿ ಸುಧಾರಣೆ ಮಾಡಲು ಕರ್ನಾಟಕ ಸರ್ಕಾರವು ಅನೇಕ ಹೊಸ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ ಮತ್ತು ಪ್ರಸ್ತುತ ಇರುವ ಕಾರ್ಯಕ್ರಮಗಳನ್ನು ಬಲಪಡಿಸಿದೆ.

ಆರೋಗ್ಯ ಕಾರ್ಯಕ್ರಮಗಳು ಸರ್ಕಾರದಿಂದ ಜಾರಿಯಾದರೂ ಸಹ ಕಾರ್ಯಕ್ರಮದ ಯಶಸ್ಸಿಗೆ ಸಮುದಾಯದ ಪಾಲ್ಗೊಳ್ಳುವಿಕೆ ಅಷ್ಟೇ ಮುಖ್ಯ. ಅದರಲ್ಲೂ ವಿಶೇಷವಾಗಿ ದಾನಿಗಳು, ನಿಗಮಗಳು, ಸರ್ಕಾರೇತರ ಸಂಸ್ಥೆಗಳು, ಧರ್ಮದತ್ತಿ ಸಂಸ್ಥೆಗಳು ಮುಂತಾದವು ಭಾಗವಹಿಸಬೇಕು.

ನಿಗಮದ ಸಾಮಾಜಿಕ ಜವಾಬ್ದಾರಿಯ ಅನುದಾನದ ಮೂಲಕ ಆರೋಗ್ಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರವು ತೆರೆದ ಮನಸ್ಸಿನಿಂದ ಬೆಂಬಲಿಸುತ್ತದೆ.

ಮೊದಲ ಹಂತದಲ್ಲಿ ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳನ್ನು ಗುರುತಿಸಿದೆ.

1. **ಆರೈಕೆ ಯೋಜನೆ:**.
   ಈ ಯೋಜನೆ ಅಡಿಯಲ್ಲಿ ರೋಗಿಗಳ ಸಹಾಯಕರಿಗೆ ಸುರಕ್ಷಿತ ಕುಡಿಯುವ ನೀರು, ಶೌಚಾಲಯ, ಸ್ನಾನದ ಕೊಠಡಿ ಸೌಲಭ್ಯ ಮತ್ತು ತಂಗಲು ಕೊಠಡಿಗಳನ್ನು ಒದಗಿಸುವ ವ್ಯವಸ್ಥೆ ಇರುತ್ತದೆ.







2. **ಡಯಾಲಿಸಿಸ್ ಘಟಕಗಳು:**

ಮಾನವ ಸಂಪನ್ಮೂಲನ ಕೊರತೆಯಿಂದ ಈಗ ಸ್ಥಾಪಿಸಲಾಗಿರುವ ಯೂನಿಟ್‌ಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ (60%). ಆದುದರಿಂದ, ಯೂನಿಟ್‌ಗಳ ಕಾರ್ಯ ನಿರ್ವಹಿಸದಿರುವುದಕ್ಕೆ ಕಾರಣ ಕಂಡು ಹಿಡಿದು ಸಾರ್ವಜನಿಕ-ಖಾಸಗಿ ಸಹಭಾಗಿತ್ವ(ಪಿಪಿಪಿ) ಪಾಲುದಾರರನ್ನು ಅಹ್ವಾನಿಸಿ ಕೊರತೆಗಳನ್ನು ನಿವಾರಿಸಿ ಕಾರ್ಯ ನಿರ್ವಹಿಸುವಂತೆ ಮಾಡಲು ತೀರ್ಮಾನಿಸಲಾಗಿದೆ. ಅಲ್ಲದೆ 100 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಘಟಕಗಳು ಲಭ್ಯವಿಲ್ಲ.

**ಪ್ರತಿ ಆಸ್ಪತ್ರೆಗೆ ಕನಿಷ್ಠ 2 ಯಂತ್ರಗಳಂತೆ ಸಿ.ಎಸ್.ಆರ್. ವಿಧಾನದ ಮೂಲಕ ಒದಗಿಸಲು ಪ್ರಸ್ತಾಪಿಸಲಾಗಿದೆ.**



3. <u>ಸಂಚಾರಿ ಆರೋಗ್ಯ ಚಿಕಿತ್ಸಾಲಯ:</u>

ಆರೋಗ್ಯ ಸೇವೆಗಳು ವಂಚಿತವಾಗಿರುವ ಗುಡ್ಡಗಾಡು, ಹಳ್ಳಿಗಳ ಜನ ಸಾಮಾನ್ಯರಿಗೆ ಅವರ ಮನೆ ಬಾಗಿಲಿಗೆ ಸಂಚಾರಿ ಘಟಕಗಳ ಮೂಲಕ ಪ್ರಾಥಮಿಕ ಚಿಕಿತ್ಸೆ ನೀಡುವ ಕಾರ್ಯಕ್ರಮ. ಒಟ್ಟು 1000 ಅಂಬ್ಯುಲೆನ್ಸ್‌ಗಳ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

**ಸಂಚಾರಿ ಆರೋಗ್ಯ ಘಟಕಗಳನ್ನು ಸ್ಥಾಪಿಸಲು ನಿಗಮಗಳು ನೆರವು ನೀಡಬಹುದು.**



4. **<u>ನಾಗರೀಕ ಸಹಾಯ ವೇದಿಕೆ:</u>** ಆಸ್ಪತ್ರೆಯಲ್ಲಿ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವುದರಿಂದ, ಸರ್ಕಾರದ ಕಾರ್ಯಕ್ರಮಗಳ ಉದ್ದೇಶ ಪೂರ್ಣವಾಗುತ್ತದೆ. ಈ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ನಾಗರೀಕ ಸಹಾಯ ವೇದಿಕೆಯನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

   **146 ತಾಲ್ಲೂಕು ಆಸ್ಪತ್ರೆಗಳಲ್ಲಿ ಸಿ.ಎಸ್.ಆರ್. ಮೂಲಕ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.**




5. **<u>ಗುತ್ತಿಗೆ ಆಧಾರದ ಮೇಲೆ ಎಮ್.ಬಿ.ಬಿ.ಎಸ್. ವೈದ್ಯರು ಮತ್ತು ತಜ್ಞರ ನೇಮಕ</u>**: ಕರ್ನಾಟಕದ ಜಿಲ್ಲಾ ಆಸ್ಪತ್ರೆಗಳಲ್ಲಿ, ತಾಲ್ಲೂಕು ಆಸ್ಪತ್ರೆಗಳಲ್ಲಿ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ಎಲ್ಲಾ ವಿಭಾಗದ ತಜ್ಞರ ಕೊರತೆ ಇರುವುದು ಕಂಡು ಬಂದಿದೆ.

   **ಆದ್ದರಿಂದ, ವಾರದಲ್ಲಿ ಒಂದು ಅಥವಾ ಎರಡು ದಿನ ಬಡ ರೋಗಿಗಳಿಗೆ ಸೇವೆ ಸಲ್ಲಿಸಲು ಮುಂದೆ ಬರುವಂತೆ ಖಾಸಗಿ ಆಸ್ಪತ್ರೆ / ವೃತ್ತಿ ನಿರತ ವೈದ್ಯರನ್ನು ಭೇಟಿ ಮಾಡಲು ಉದ್ದೇಶಿಸಲಾಗಿದೆ.**

6. **<u>ಲೈಸೋಸೋಮಲ್ ಶೇಖರಣೆ ನ್ಯೂನತೆ:</u>**

   ಲೈಸೋಸೋಮಲ್ ಶೇಖರಣೆ ನ್ಯೂನತೆ ಇರುವ ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಲು ಉದ್ದೇಶಿಸಲಾಗಿದೆ. ಈ ಕಾಯಿಲೆಗೆ ಚಿಕಿತ್ಸೆಯು ಅತ್ಯಂತ ದುಬಾರಿಯಾಗಿದ್ದು, ಇದರ ವೆಚ್ಚವನ್ನು ಭರಿಸುವುದು ಹೆಚ್ಚಿನ ಕುಟುಂಬಗಳಿಗೆ ಅಸಾಧ್ಯವಾಗಿದೆ. ಹಾಗೂ ಆರ್.ಬಿ.ಎಸ್.ವೈ. ಅಥವಾ ಆರ್.ಬಿ.ಎಸ್.ಕೆ. ಅಂತಹ ವಿಮಾ ಯೋಜನೆಯಡಿಯಲ್ಲಿ ಇದನ್ನು ಸೇರಿಸಲಾಗಿಲ್ಲ. ಆದ್ದರಿಂದ ಚಿಕಿತ್ಸೆಯನ್ನು ಸಿ.ಎಸ್.ಆರ್. ಮೂಲಕ ಪ್ರಾಯೋಜಿಸಬಹುದು.

**ಪ್ರತಿ ಮಗುವಿಗೆ ವರ್ಷಕ್ಕೆ ಅಂದಾಜು ರೂ.50.00 ಲಕ್ಷ ವೆಚ್ಚದಲ್ಲಿ ನಿಗಮಗಳು ಚಿಕಿತ್ಸೆಯನ್ನು ಪ್ರಾಯೋಜಿಸಬಹುದು.**

**7. ರಾಷ್ಟ್ರೀಯ ಫ್ಲೋರಾಸಿಸ್ ನಿವಾರಣಾ ಮತ್ತು ನಿಯಂತ್ರಣಾ  ಕಾರ್ಯಕ್ರಮ:**

1. ನೀರಿನಲ್ಲಿರುವ-ಫ್ಲೋರೈಡ್ ಅನ್ನು ಹೆಚ್ಚು, ಸೇವಿಸಿದಾಗ ಉಂಟಾಗುವ ಪ್ರತಿಕೂಲ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವುದು.
2. ದಿನನಿತ್ಯ ಡಿ-ಫ್ಲೋರಿನೇಟೆಡ್ ನೀರನ್ನೇ ಕುಡಿಯುವಂತೆ ಸಮುದಾಯದ ಮನವೊಲಿಸುವುದು ಹಾಗೂ ಅದರ ಬಗ್ಗೆ ತರಬೇತಿ ನೀಡುವುದು.
3. ಮಳೆ ನೀರಿನಿಂದ ಬೆಳೆ ಬೆಳೆಸುವುದು ಮತ್ತು ಅಂತರ್ಜಲದ ನೀರನ್ನು ಕುಡಿಯದಂತೆ ತಪ್ಪಿಸಲು ಮೇಲ್ಪದರದ ನೀರನ್ನು ರಕ್ಷಿಸಲು ಉತ್ತೇಜಿಸುವುದು.

**ರಾಜ್ಯದ ಗುರುತಿಸಲಾದ 18 ಎಂಡಿಮಿಕ್ ಜಿಲ್ಲೆಗಳ 8690 ಹಳ್ಳಿಗಳ ಪೈಕಿ ಇದುವರೆಗೂ 2917 ಹಳ್ಳಿಗಳಲ್ಲಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಿದ್ದು ಬಾಕಿ ಇರುವ 5773 ಘಟಕಗಳನ್ನು ಸಿ.ಎಸ್.ಆರ್. ಮೂಲಕ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.**





**8. ಆರೋಗ್ಯದ ಕಿಟ್:**

ರಾಜ್ಯದಲ್ಲಿ ತಾಯಂದಿರ ಮತ್ತು ಶಿಶು ಮರಣವನ್ನು ಕಡಿಮೆ ಮಾಡುವ ಸಲುವಾಗಿ ತಾಯಿ ಮತ್ತು ಮಗುವಿಗೆ ಪ್ರಸವೋತ್ತರ ಆರೈಕೆ ನೀಡಲು ಬಡಗರ್ಭಿಣಿ ಮಹಿಳೆಗೆ ಆರೋಗ್ಯ ಕೇಂದ್ರಗಳು ಮತ್ತು ಆಸ್ಪತ್ರೆಗಳಲ್ಲಿ ಆರೋಗ್ಯ ಕಿಟ್‌ಗಳನ್ನು ನೀಡಲಾಗುತ್ತಿದೆ.

ಸರ್ಕಾರಿ ಆರೋಗ್ಯ ಸಂಸ್ಥೆಗಳು ಈ ಕಿಟ್‌ಗಳನ್ನು ಬಿ.ಪಿ.ಎಲ್. ಕುಟುಂಬಗಳಿಗೆ ಉಚಿತವಾಗಿ ನೀಡುತ್ತವೆ. ಬಿ.ಪಿ.ಎಲ್. ಮಹಿಳೆಯು ಪ್ರತಿ ಜೀವಂತ ಮಗುವಿನ ಹೆರಿಗೆಗೆ ಒಂದರಂತೆ ಗರಿಷ್ಠ ಎರಡು ಕಿಟ್‌ಗಳನ್ನು ಪಡೆಯಲು ಅರ್ಹಳಾಗಿರುತ್ತಾಳೆ. ಈ ಕಿಟ್‌ನಲ್ಲಿ ಹೆರಿಗೆ ನಂತರ ತಾಯಿ ಹಾಗೂ ಮಗುವಿಗೆ ಅವಶ್ಯವಿರುವ ಸಾಮಗ್ರಿಗಳನ್ನು ಇರಿಸಲಾಗಿದೆ.

**ಆರೋಗ್ಯದ ಕಿಟ್‌ಗಳನ್ನು ತಾಯಂದಿರಿಗೆ ಒದಗಿಸಲು ನಿಗಮಗಳು ನೆರವು ನೀಡಬಹುದು.**




## 9. ರಾಷ್ಟ್ರೀಯಬಾಲ ಸ್ವಾಸ್ಥ್ಯ ಕಾರ್ಯಕ್ರಮ: (ಆರ್‌ಬಿಎಸ್‌ಕೆ)

ಈ ಯೋಜನೆ ಅಡಿ 18 ವರ್ಷದೊಳಿಗಿನ ಮಕ್ಕಳನ್ನು 38 ಆರೋಗ್ಯ ಅಂಶಗಳ ಬಗ್ಗೆ ಪರೀಕ್ಷಿಸಲಾಗುತ್ತದೆ. ಶಾಲಾ ಮಕ್ಕಳ ಆರೋಗ್ಯ ಸ್ಥಿತಿಯನ್ನು ಪರೀಕ್ಷೆ ಮಾಡುವ ಮೂಲಕ ಮಕ್ಕಳ ಆರೋಗ್ಯ ನ್ಯೂನತೆಗಳನ್ನು ಪತ್ತೆ ಹಚ್ಚಿ ಸಕಾಲದಲ್ಲಿ ಚಿಕಿತ್ಸೆ ಕಳುಹಿಸುವುದೇ ಈ ಕಾರ್ಯಕ್ರಮದ ಮುಖ್ಯ ಗುರಿಯಾಗಿದೆ.

ರಾಜ್ಯದ ಎಲ್ಲಾ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ 1-12ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸರ್ಕಾರಿ, ಅನುದಾನ, ರೆಸಿಡೆನ್ಸಿಯಲ್ ಸ್ಕೂಲ್‌ಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ ಜಾರಿಯಾಗುತ್ತಿದೆ.

**4'ಡಿ'ಗಳನ್ನು (ಹುಟ್ಟಿದಾಗಿನ ತೊಂದರೆಗಳು, ಕೊರತೆಗಳು, ಬಾಲ್ಯದ ಕಾಯಿಲೆಗಳು ಮತ್ತು ವಿಕಸನದ ವಿಳಂಬ ಮತ್ತು ಅಶಕ್ತತೆ) ಶೀಘ್ರವಾಗಿ ಪತ್ತೆ ಹಚ್ಚಲು ಮತ್ತು ನಿರ್ವಹಣೆ ಮಾಡಲು ತಜ್ಞರ ಮತ್ತು ವಿಶೇಷ ತಜ್ಞರ ಸೇವೆಗಳನ್ನು ಒದಗಿಸಲು ನಿಗಮಗಳು ನೆರವು ನೀಡಬಹುದು.**



**10. ಪೌಷ್ಟಿಕ ಆಹಾರ:** ಅಪೌಷ್ಟಿಕತೆಯು ಶಿಶು ಮರಣ ಮತ್ತು ಕಾಯಿಲೆಗಳಾದ ಶ್ವಾಸಕೋಶದ ಸೋಂಕು, ಬೇಧಿ, ಮಲೇರಿಯಾ ಮತ್ತು ದಡಾರವನ್ನು ಹೆಚ್ಚಿಸುತ್ತದೆ. ತೀವ್ರ ಅಪೌಷ್ಟಿಕತೆಯ ಮಕ್ಕಳ ಮರಣಗಳನ್ನು ತಡೆಗಟ್ಟಲು ವಿಶೇಷ ಚಿಕಿತ್ಸೆ ಮತ್ತು ಪೌಷ್ಟಿಕ ಆಹಾರ ನೀಡುವುದು ಅತ್ಯವಶ್ಯಕ.

**ಪೌಷ್ಟಿಕ ಆಹಾರ ಪುನಶ್ಚೇತನ ಕೇಂದ್ರಗಳು (ಎನ್.ಆರ್.ಸಿ. ಗಳು):** ತೀವ್ರ ಅಪೌಷ್ಟಿಕತೆಯಿಂದಿರುವ ಮಕ್ಕಳನ್ನು ಒಳರೋಗಿಗಳಾಗಿ ಈ ಕೇಂದ್ರಗಳಲ್ಲಿ ಆರೈಕೆ ಒದಗಿಸಲಾಗುತ್ತದೆ.

**ಮಾರ್ಪಡಿತ ಪೌಷ್ಟಿಕ ಆಹಾರ ಪುನಶ್ಚೇತನಾ ಕೇಂದ್ರಗಳು (ಎಮ್.ಎನ್.ಆರ್.ಸಿ)**: ತಾಲ್ಲೂಕು ಮಟ್ಟದಲ್ಲಿ ಸೌಲಭ್ಯ ಆಧಾರಿತ ಘಟಕಗಳಿಗೆ ಮಾರ್ಪಾಡಿತ ಪೌಷ್ಟಿಕ ಆಹಾರ ಪುನಶ್ಚೇತನಾ ಕೇಂದ್ರಗಳೆನ್ನುತ್ತಾರೆ.

ಮೇಲಿನ ಅಂಶಗಳ ಜೊತೆಗೆ **ಸಿ.ಎಸ್.ಆರ್. ವಿಧಾನದ ಮೂಲಕ ಸಿ.ಎಫ್.ಟಿ.ಆರ್.ಐ. ತಾಂತ್ರಿಕತೆಯಡಿಯಲ್ಲಿ ಈ ಕೆಳಕಂಡ ಪೌಷ್ಟಿಕ ಆಹಾರಗಳನ್ನು ಒದಗಿಸಬಹುದು.**

1. ಶಕ್ತಿವರ್ಧಕ ಆಹಾರ - ಹೆಚ್ಚು ಸಸಾರ ಜನಕ ಪೂರಕದ ಜೊತೆ ಉತ್ತಮ ಪ್ರಮಾಣದಲ್ಲಿ ಅನ್ನಾಂಗ ಮತ್ತು ಖನಿಜಾಂಶಗಳನ್ನು ಸೇರಿಸುತ್ತಾರೆ.
2. ಕಬ್ಬಿಣಾಂಶ ಹೊಂದಿದ ಹಿಟ್ಟು.

3. ನುಗ್ಗೇಕಾಯಿ ಪುಡಿ.
4. ಐರಲ್ ಫೋಲಿಕ್ ಹೊಂದಿದ ಬಿಸ್ಕತ್.





5. ಸ್ಪಿರುಲಿನಾ ಉತ್ಪನ್ನಗಳನ್ನು ತಯಾರಿಸುವ ವಿಧಾನ.

11. **ಟೆಲಿಮೆಡಿಸಿನ್:**

ತಾಲ್ಲೂಕು ಮಟ್ಟದಲ್ಲಿ ಅಲಭ್ಯವಾಗಿರುವ ಸಲಹೆಗಾರರು / ತಜ್ಞರ ಸೇವೆಯನ್ನು ಟೆಲಿಮೆಡಿಸಿನ್ ಮೂಲಕ ಒದಗಿಸಲು ಉದ್ದೇಶಿಸಲಾಗಿದೆ. ತಜ್ಞರ ಸಲಹೆಯನ್ನು ಸಕಾಲದಲ್ಲಿ ಪಡೆಯುವುದರಿಂದ ರೋಗವನ್ನು ಪತ್ತೆ ಹಚ್ಚಿ ರೋಗಿಗಳ ಅನಾರೋಗ್ಯ ಅಥವಾ ಮರಣವನ್ನು ತಡೆಗಟ್ಟಬಹುದು.

**ಟೆಲಿಮೆಡಿಸಿನ್ ಸೌಲಭ್ಯವನ್ನು ಅನುಷ್ಠಾನಗೊಳಿಸುವಲ್ಲಿ ಸಿ.ಎಸ್.ಆರ್. ಮುಖ್ಯ ಪಾತ್ರ ವಹಿಸಬಹುದು.**

**12. ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ:**

ರಾಜ್ಯದಲ್ಲಿ ಮಾನಸಿಕ ತಜ್ಞ ವೈದ್ಯರ ಕೊರತೆ ಇದ್ದು, ಇವರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಗುತ್ತಿಗೆ ವೈದ್ಯರ ಸೇವೆ/ಸಂಭಾವನೆ ಹಾಗೂ ಸಂಚಾರಿ ಭತ್ಯೆಯನ್ನು ಸಿ.ಎಸ್.ಆರ್. ಮೂಲಕ ಪ್ರಾಯೋಜಿಸಬಹುದು.

**13. ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ (ಐ.ಇ.ಸಿ):**

ಈ ವಿಭಾಗವು ಸಮೂಹ ಮಾಧ್ಯಮಗಳ ಮೂಲಕ ಕೆಳಕಂಡ ಕಾರ್ಯ ಚಟುವಟಿಕೆಗಳೊಂದಿಗೆ ನಾಗರೀಕರನ್ನು ತಲುಪುತ್ತಿದೆ.

- ಭಿತ್ತಿಪತ್ರ, ಮಡಿಕೆಪತ್ರ, ಫ್ಲಿಫ್‌ಬುಕ್, ಕರಪತ್ರ ಮತ್ತು ಸನ್‌ಬೋರ್ಡ್
- ಟಿವಿ ಸ್ಪಾಟ್ಸ್ ಮತ್ತು ರೇಡಿಯೋ ಜಿಂಗಲ್ಸ್.
- ಕರಾರಸಾಸಂ/ಎನ್.ಡಬ್ಲ್ಯೂ.ಕೆಆರ್‌ಟಿಸಿ/ ಎನ್.ಇ.ಕೆಆರ್.ಟಿಸಿ/ಬೆ.ಮ.ನ.ಸಾಸಂಗಳ ಬಸ್ಸುಗಳ ಮೇಲೆ ಮಾಹಿತಿಯನ್ನು ಬಸ್ ಬ್ರಾಂಡಿಂಗ್.
- ಟೆಲಿ ಫಿಲಂ ಮತ್ತು ಡಾಕ್ಯುವೆಂಟರಿ, ಟಿವಿ ಸ್ಪಾಟ್,
- ರೇಡಿಯೋ ಸಂದರ್ಶನ, ರೇಡಿಯೋ ಡ್ರಾಮ, ರೇಡಿಯೋ ಜಿಂಗಲ್ಸ್ ಮತ್ತು ಆಕಾಶವಣಿ ಎಫ್.ಎಂ. ರೇಡಿಯೋಗಳಲ್ಲಿ ಫೋನ್ ಇನ್ ಕಾರ್ಯಕ್ರಮಗಳು.
- ಆರೋಗ್ಯ ಕಾರ್ಯಕ್ರಮ ಕುರಿತಂತೆ ಫ್ಲೆಕ್ಸ್ ಹೋರ್ಡಿಂಗ್ಸ್‌ಗಳನ್ನು.
- ರೈಲ್ವೆ ಸ್ಟೇಷನ್ ಮತ್ತು ಕ.ರಾ.ರ.ಸಾ.ಸಂ ಬಸ್ ನಿಲ್ದಾಣಗಳಲ್ಲಿ ಎಲ್.ಇ.ಡಿ. ಟಿವಿಗಳ ಮೂಲಕ ಆರೋಗ್ಯ ಮಾಹಿತಿಯ ಪ್ರಸಾರ.
- ರಾಜ್ಯ ಮಟ್ಟದ ಕಾರ್ಯಾಗಾರ..
- ಹದಿವಯಸ್ಕ ಹುಡುಗಿಯರಿಗೆ ಮತ್ತು ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಪುನರ್ಮನನ ತರಬೇತಿ ಕಾರ್ಯಕ್ರಮ.
- ಶಾಲಾ ಶಿಕ್ಷಕರಿಗೆ ತಾಲ್ಲೂಕು ಮಟ್ಟದಲ್ಲಿ ಪುನರ್ಮನನ ತರಬೇತಿ ಕಾರ್ಯಕ್ರಮ.
- ಹೆರಿಗೆಗೂ ಮತ್ತು ಭ್ರೂಣಲಿಂಗ ಪತ್ತೆ ಪ್ರತಿಬಂಧಕ ಆಜ್ಞೆ ಬಗ್ಗೆ ಆಶಾ, ಅಂಗನವಾಡಿ ಕಾರ್ಯಕರ್ತರು, ಸ್ವಯಂ ಸೇವಾ ಸಂಸ್ಥೆಗಳಿಗೆ ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರ.
- ವಿಷಯ ತಜ್ಞರಿಂದ ದೂರದರ್ಶನ ಮತ್ತು ರೇಡಿಯೋದಲ್ಲಿ ಸಿ.ಎಚ್. ಮತ್ತು ಎ.ಆರ್.ಎಸ್.ಎಚ್ ಕಾರ್ಯಕ್ರಮದ ಮೇಲೆ ಗುಂಪು ಚರ್ಚೆ.

**ಆರೋಗ್ಯ ಕಾರ್ಯಕ್ರಮಗಳ ಪ್ರಚಾರವನ್ನು ಮೇಲಿನ ಯಾವುದೇ ವಿಧದಲ್ಲಿಯಾದರೂ ನಿಗಮಗಳು ಪ್ರಾಯೋಜಿಸಿ ಸಹಾಯ ಮಾಡಬಹುದು.**